





ಡಾ. ಎಸ್. ರಾಮಮೂರ್ತಿ

# 11-6-2015ರಿಂದ 17-6-2015ರವರೆಗೆ



**ಮೇಷ**

ವಾರದ ಆರಂಭದಲ್ಲಿ ಉತ್ಸಾಹ ಕುಗ್ಗುವುದು. ವ್ಯವಹಾರಗಳಲ್ಲಿ ನಷ್ಟ. ಕಾರ್ಯವೈಫಲ್ಯ. ಆರೋಗ್ಯ ವ್ಯತ್ಯಯ. ಬಂಧು ಮಿತ್ರರ ಮೇಲೆ ಸಿಟ್ಟು, ವಾರದ ಮಧ್ಯಭಾಗದಿಂದ ಅನುಕೂಲ. ಸ್ಥಿರ ಮನಸ್ಸು. ವಾಹನ ಸೌಖ್ಯ, ತಾಳ್ಮೆಯಿಂದ ಮಾತನಾಡುವಿಕೆ. ಉದ್ಯೋಗದಲ್ಲಿ ಮುನ್ನಡೆ, ವ್ಯಾಪಾರ ವಹಿವಾಟಿನಲ್ಲಿ ಲಾಭ. ಶುಭದಿನ: 15; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.



**ವೃಷಭ**

ವಾರದ ಆರಂಭದಲ್ಲಿ ಸೌಖ್ಯ. ಹಿತಕರ ಘಟನೆಗಳು ಪ್ರೀತಿ ಪಾತ್ರರಿಂದ ಸಹಾಯ. ವ್ಯವಹಾರಗಳಲ್ಲಿ ಪ್ರಗತಿ. ಗೌರವ ಪ್ರಾಪ್ತಿ. ವಾರದ ಮಧ್ಯಭಾಗದಲ್ಲಿ ಕುಟುಂಬ ಸದಸ್ಯರ ಮೇಲೆ ಸಿಟ್ಟು. ಅಕಾಲ ಭೋಜನ. ಅಹಿತ ಸಂದೇಶ. ಆಟಪಾಠಗಳಲ್ಲಿ ನಿರಾಶಕ್ತಿ. ಕಾರ್ಯಗಳಲ್ಲಿ ಅಡಚಣೆ ಲೇವಾದೇವಿಗಳಲ್ಲಿ ಹಾನಿ. ಶುಭದಿನ: 15; ದುರ್ಗಾ, ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ.



**ಮಿಥುನ**

ವಾರದ ಮಧ್ಯಭಾಗದವರೆಗೂ ಅನುಕೂಲ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ಅನಾವಶ್ಯಕ ಖರ್ಚು ತಪ್ಪುವುದು. ಕುಟುಂಬದಲ್ಲಿ ಒಮ್ಮತ. ಲೇವಾದೇವಿಗಳಲ್ಲಿ ಲಾಭ, ಪ್ರಯಾಣ ಸೌಖ್ಯ, ಆತ್ಮೀಯರೊಂದಿಗೆ ಸಮಾಲೋಚನೆ. ವಾರಾಂತ್ಯದಲ್ಲಿ ಆಲಸ್ಯ, ಶತ್ರುಭೀತಿ. ಸೋದರವರ್ಗದವರಿಂದ ಸಮಸ್ಯೆ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶುಭದಿನ: 14; ಗಣಪತಿ, ಶಿವ ಅಷ್ಟೋತ್ತರ ಪಠಿಸಿ.



**ಕಟಕ**

ವಾರದ ಆರಂಭದಲ್ಲಿ ಭಯ. ಹಿರಿಯರಿಂದ ಒತ್ತಡ. ಅನಾವಶ್ಯಕ ತಿರುಗಾಟ, ಉದ್ಯೋಗದಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ. ಅನಾರೋಗ್ಯ. ವಾರದ ಮಧ್ಯಭಾಗದಿಂದ ಸಮಾಧಾನ. ಕೆಲಸ ಕಾರ್ಯಗಳಲ್ಲಿ ಸಫಲತೆ. ಆತ್ಮಬಲ ಹೆಚ್ಚುವುದು. ಮಕ್ಕಳು ಸಹಕಾರ ನೀಡುವರು. ವ್ಯಾಪಾರದಲ್ಲಿ ಹೆಚ್ಚಿನ ಲಾಭ. ತಕರಾರು ಬಗೆಹರಿಯುವುದು. ಶುಭದಿನ: 15; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ.



**ಸಿಂಹ**

ವಾರದ ಆರಂಭದಲ್ಲಿ ಮುಗ್ಗಟ್ಟು. ವೃತ್ತಿ ಪ್ರವೃತ್ತಿಗಳಲ್ಲಿ ಅಶಾಂತಿ. ಅನಾರೋಗ್ಯ. ವಾರದ ಮಧ್ಯಭಾಗದಿಂದ ಮನಃಶಾಂತಿ. ಹಿತಕರ ಸಂದೇಶ. ಹಿಂದಿನ ಆಸೆ ಆಕಾಂಕ್ಷೆಗಳು ಈಡೇರುವ ಸಂಭವ. ಕಾರ್ಯ ಕಲಾಪಗಳಲ್ಲಿ ಯಶಸ್ಸು. ಸೋದರ ವರ್ಗದವರಿಂದ ಸಹಾಯ. ಗುರುಹಿರಿಯರಿಂದ ಸಲಹೆ, ಗೌರವ. ಶುಭದಿನ: 15; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



**ಕನ್ಯಾ**

ವಾರದ ಆರಂಭದಲ್ಲಿ ಸಮಾಧಾನ ಸೌಖ್ಯ. ಶ್ರಮವಿಲ್ಲದೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಆತ್ಮೀಯರಿಂದ ಸಹಾಯ. ವಾರದ ಮಧ್ಯಭಾಗದಲ್ಲಿ ಆತಂಕ. ಹಿರಿಯರ ಮೇಲೆ ಕೋಪ. ಉದ್ಯೋಗದಲ್ಲಿ ತಪ್ಪುಗಳಾಗುವಿಕೆ. ಲೇವಾದೇವಿಗಳಲ್ಲಿ ಹಾನಿ. ಅನಾರೋಗ್ಯ ಪೆಟ್ಟಾಗುವ ಸಾಧ್ಯತೆ. ವಾರಾಂತ್ಯದಲ್ಲಿ ಪರಿಸ್ಥಿತಿ ಸುಧಾರಣೆ. ಶುಭದಿನ: 12; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



**ತುಲಾ**

ವಾರದ ಮಧ್ಯಭಾಗದವರೆಗೂ ಸಂತಸ. ಶ್ರಮವಿಲ್ಲದೆ ಕಾರ್ಯ ಸಾಧನೆ, ವಿರೋಧಿಗಳಿಗೆ ಸೋಲು. ಆಟಪಾಠಗಳಲ್ಲಿ ಮೇಲುಗೈ. ಕುಟುಂಬದಲ್ಲಿ ಶಾಂತಿ ವಾತಾವರಣ. ಪ್ರಯಾಣ ಸೌಖ್ಯ. ಹಿತಕರ ಸಂದೇಶ. ವಸ್ತ್ರಾಭರಣ ಖರೀದಿ ಯೋಜನೆ. ವಾರಾಂತ್ಯದಲ್ಲಿ ಆಲಸ್ಯ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ, ಆರೋಗ್ಯ ವ್ಯತ್ಯಯ. ಅಧಿಕ ಖರ್ಚು. ಶುಭದಿನ: 13; ಗಣಪತಿ, ಲಕ್ಷ್ಮೀ, ಅಷ್ಟೋತ್ತರ ಪಠಿಸಿ.



**ವೃಶ್ಚಿಕ**

ವಾರದ ಆರಂಭದಲ್ಲಿ ಬೇಸರ. ಅಧ್ಯಯನದಲ್ಲಿ ನಿರಾಸಕ್ತಿ. ಮಕ್ಕಳಿಂದ ತೊಂದರೆ. ವೃತ್ತಿ ವ್ಯವಹಾರಗಳಲ್ಲಿ ಒತ್ತಡ. ಕುಟುಂಬ ಸದಸ್ಯರಿಂದ ಅಸಹಕಾರ. ವಾರದ ಮಧ್ಯಭಾಗದಿಂದ ಅನುಕೂಲ. ಅಭಿವೃದ್ಧಿ, ಆತ್ಮ ಬಲ ಹೆಚ್ಚುವುದು. ನಿರೀಕ್ಷೆಯಂತೆ ಕೆಲಸ ಕಾರ್ಯಗಳು ನಡೆಯುವುದು. ಕ್ರಯ ವಿಕ್ರಯಗಳಲ್ಲಿ ಯಶಸ್ಸು. ಶುಭದಿನ: 16; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.



**ಧನಸ್ಸು**

ವಾರದ ಆರಂಭದಲ್ಲಿ ತೊಂದರೆ ತಾಪತ್ರಯ. ಸಣ್ಣ ಪುಟ್ಟ ಪೆಟ್ಟಾಗುವಿಕೆ. ಆರೋಗ್ಯ ವ್ಯತ್ಯಯ. ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಸಿಟ್ಟಿನ ಮಾತುಗಳು. ವಾರದ ಮಧ್ಯಭಾಗದಿಂದ ಶಾಂತಿ ಸಮಾಧಾನ. ಆತ್ಮ ಬಲ ವೃದ್ಧಿ. ಗಣ್ಯರಿಂದ ಸಹಾಯ. ಕಾರ್ಯಕಲಾಪಗಳಲ್ಲಿ ಸಫಲತೆ, ವ್ಯಾಪಾರದಲ್ಲಿ ಲಾಭ. ಗುರುಹಿರಿಯರೊಂದಿಗೆ ಸಮಲೋಚನೆ. ಶುಭದಿನ: 15; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.



**ಮಕರ**

ವಾರದ ಆರಂಭದಲ್ಲಿ ಸೌಖ್ಯ. ಸರಾಗವಾಗಿ ನಡೆಯುವ ಕಾರ್ಯಗಳು. ಪ್ರೀತಿಪಾತ್ರರ ಭೇಟಿ. ಕ್ರಯ ವಿಕ್ರಯಗಳಲ್ಲಿ ಲಾಭ, ವಾಹನ ಖರೀದಿ ಯತ್ನ, ವಾರದ ಮಧ್ಯಭಾಗದಲ್ಲಿ ಒತ್ತಡ. ಅಹಿತ ಭೋಜನ. ಉದ್ಯೋಗದಲ್ಲಿ ಹಿನ್ನಡೆ. ವ್ಯಾಪಾರದಲ್ಲಿ ಹಾನಿ. ಅಧಿಕ ಖರ್ಚು. ಕೋಪದ ಮಾತುಗಳು. ವಾರಾಂತ್ಯದಲ್ಲಿ ಸಮಾಧಾನ. ಶುಭದಿನ: 12; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ.



**ಕುಂಭ**

ವಾರದ ಮಧ್ಯಭಾಗದವರೆಗೂ ಸಂತೋಷ. ಕುಟುಂಬ ಸದಸ್ಯರಲ್ಲಿ ಹೊಂದಾಣಿಕೆ. ವ್ಯಾಪಾರದಲ್ಲಿ ಸೂಕ್ತ ಲಾಭ. ಕಲೆ ಕ್ರೀಡೆಗಳಲ್ಲಿ ಆಸಕ್ತಿ. ಆಭರಣ ಖರೀದಿ ಚಿಂತನೆ. ವಾಹನ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಆಪ್ತರಿಂದ ಸಲಹೆ, ವಾರಾಂತ್ಯದಲ್ಲಿ ಆತಂಕ. ಅಕಾಲ ಪ್ರಯಾಣ. ಕಾರ್ಯ ವೈಫಲ್ಯ. ಲೇವಾದೇವಿಗಳಲ್ಲಿ ನಷ್ಟ. ಶುಭದಿನ: 14; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ.



**ಮೀನ**

ವಾರದ ಮಧ್ಯಭಾಗದವರೆಗೂ ಅನುಕೂಲ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಮಿತ್ರರಿಂದ ಸಹಾಯ. ಕಲೆ ಕ್ರೀಡೆಗಳಲ್ಲಿ ಆಸಕ್ತಿ. ಬಂಧುಗಳ ಮನಃಸ್ತಾಪ ದೂರವಾಗುವುದು. ಗಣ್ಯರಿಂದ ಸಲಹೆ, ವಿರೋಧಿಗಳು ಹಿಂದೆ ಸರಿಯುವರು. ವಾರಾಂತ್ಯದಲ್ಲಿ ಅಸ್ಥಿರತೆ. ಉದ್ಯೋಗದಲ್ಲಿ ಒತ್ತಡ ಅನಾರೋಗ್ಯ. ಶುಭದಿನ: 15; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ.